ಅವು ನನ್ನನ್ನು ಖಂಡಿತಾ ತುಳಿದು ಹಾಕುತ್ತವೆ. ಇಲ್ಲ ಅವುಗಳಿಗೆ ವಿಮುಖವಾಗಿ ಹೋದರೂ ಆ ದಾರಿ ನನ್ನನ್ನು ಇನ್ನೆಲ್ಲಿಗೋ ಕೊಂಡೊಯ್ಯುತ್ತದೆ. ಇಲ್ಲಿಯೇ ಕೆಲಹೊತ್ತು ಆನೆಗಳ ಗುಂಪು ದಾಟಿ ಹೋಗುವವರೆಗೂ ಅವಿತುಕೊಂಡು ಇಲ್ಲವೇ, ಪಕ್ಕದಲ್ಲಿರುವ ಆಲದ ಮರದ ಮೇಲಾದರೂ ಹತ್ತಿ ಕೂರಬೇಕೆಂದು ಹಂಚಿಕೆಹಾಕಿದ. ಬೃಹತ್ತಾಗಿದ್ದ ಆಲದ ಮರ, ಕೊನೇರಿಗೆ ಅಕ್ಷರಶಃ ಭೂತದಂತೆ ಕಂಡಿತು. ಉದ್ದವಾಗಿ ಚಾಚಿಕೊಂಡಿದ್ದ ಅದರ ಬಿಳಿಲುಗಳು ಕಬಂಧ ಬಾಹುಗಳಂತೆ ಕಂಡವು. ಹೇಗೋ ಸಾಹಸ ಮಾಡಿ ಆ ಮರದ ಮೇಲೆ ಹತ್ತಿ ಕುಳಿತ. ಎಷ್ಟೊತ್ತಿನ ನಂತರವೋ ಆನೆಗಳ ಸದ್ದು ಕಡಿಮೆಯಾದ ಮೇಲೆ ಮೆಲ್ಲನೇ ಕೆಳಗಿಳಿದ.

ಕೊನೇರಿಗೆ ಇಡೀ ದಿನ ನಡೆಯೋದೆ ಆಯ್ತು ಕರಡಿಬೆಟ್ಟದ ತಿರುವು ಸಿಗುವ ಮಾತಿಲ್ಲ, ತನಗೆ ದಾರಿ ತಪ್ಪುತ್ತಿದೆ ಎನಿಸಿತು. ಹೀಗೆ ಎರಡುಬಾರಿ ಬಳಸಿದ ದಾರಿಯನ್ನೇ ಬಳಸಿ ಮೊದಲು ನಿಂತ ಜಾಗಕ್ಕೆ ಬಂದ ಕೊನೇರಿಗೆ 'ದಾರಿ ತಪ್ಪಿಸುವ ಬಳ್ಳಿಯ' ನೆನಪಾಗಿತ್ತು. ಬಹುಶಃ ನಾನು ಆ ಬಳ್ಳಿಯನ್ನೇ ದಾಟಿರಬೇಕು. ಅದಕ್ಕೆ ಹೀಗಾಗುತ್ತಿದೆ ಎಂದು ಸ್ವಲ್ಪ ಹೊತ್ತು ಅಲ್ಲೇ ಕಲ್ಲುಬಂಡೆಯ ಮೇಲೆ ಕುಳಿತು ವಿಶ್ರಮಿಸಿದ. ಮೇಲೆದ್ದು ಹಠದಿಂದೆಂಬಂತೇ ನಡೆಯತೊಡಗಿದ. ಅವನ ತಲೆಯಲ್ಲಿರೋದು ಒಂದೇ. ರಾತ್ರಿಯಾಗುವುದರೊಳಗಾಗಿ ಆ ಜಾಗ ಅರಸಬೇಕು, ಆ ಮಹಾನುಭಾವನನ್ನು ಕಾಣಬೇಕು ಎಂಬುದು.



ಕೊನೇರಿ ಕರಡಿಬೆಟ್ಟದ ಪಾದಕ್ಕೆ ಪಾದವಿಟ್ಟಿದ್ದು ಬೆಳಕು ಕತ್ತಲೆಗೆ ಆಹುತಿಯಾಗುವ ಹೊತ್ತು. ಎರಡು ದಿನ ನಡೆದು ಬರುವಾಗ ಹಗಲಿನಲ್ಲೂ ಕಾಡಗತ್ತಲೇ. ಆದರೆ ಮರಗಳ ಸಂದಿಲಿಂದಾದರೂ ಅಪರೂಪಕ್ಕೆ ಸೂರ್ಯ ಕಂಡಿದ್ದರೆ ಎಳೆ ಬಿಸಿಲಿನಿಂದ ಜಡಗೊಂಡ ದೇಹದಲ್ಲಿ ಶಕ್ತಿ ತುಂಬಿಕೊಳ್ಳುತ್ತಿತ್ತು. ಬೆಟ್ಟದಂಚು ತಲುಪಿ ಅಲ್ಲೆಲ್ಲಿಯಾದರೂ ನೋಡಿದರೆ ಬೆಟ್ಟದ ತಿರುವು, ಒಂಟಿ ಗುಡಿಸಲು ಸಿಕ್ಕರೂ ಸಿಗಬಹುದಿತ್ತು. ಛೇ ನನಗೆ ಮನಸ್ಸಾಗುತ್ತಿಲ್ಲವಲ್ಲ ಎಂದವನಿಗೆ ಒಂದ್ಹೆಜ್ಜೆ ಕಿತ್ತಿ ಮುಂದಿಡದಷ್ಟು ನಿತ್ರಾಣಗೊಂಡಂತೆನಿಸಿತು. ಹುಣ್ಣಿಮೆಯಾದ ನಂತರದ ನಾಲ್ಕನೇ ದಿನವದು. ಗಿಡಗಳ ಮಧ್ಯದಿಂದ ಬಿದ್ದ ಬೆಳದಿಂಗಳು ಅವನನ್ನು ಮುದಗೊಳಿಸಿತು. ಇನ್ನೇನೂ ರಾತ್ರಿಯಾಯ್ತೆಂದು ತಂಗಲು ಸುರಕ್ಷಿತ ಸ್ಥಳ ಹುಡುಕತೊಡಗಿದ. ಆಗಲೇ ಸುತ್ತಮುತ್ತಲೆಲ್ಲ ಎಂತೆಂತವೋ ಹುಳುಗಳು, ಕಪ್ಪೆಗಳು, ಕೀಟಗಳು ಜಿದ್ದಿಗೆ ಬಿದ್ದಂತೆ ವಿಚಿತ್ರ ಶಬ್ದ ಹೊರಡಿಸುತ್ತಿದ್ದವು. ಆನೆಯ ಘೀಳಾಟ, ಕಡವೆಯ ಘಂಟಾನಾದ, ಜಿಂಕೆಯ ಕೂಗಿನ ಸದ್ದು ಮಧ್ಯೇ ಮಧ್ಯೇ ಕೇಳಿಸುತ್ತಿತ್ತು. ಎರಡೂ ದಿನ ಬಿಡುವು ಕೊಟ್ಟಿದ್ದ ಮಳೆಯೀಗ ಮತ್ತೇ ಹನಿಹಾಕತೊಡಗಿತು. ಕೊನೇರಿ ಈಗ ಅವಸರಿಸಿದ.

ಮತ್ತೊಂದು ದೊಡ್ಡ ಆಲದ ಮರದ ಬುಡಕ್ಕೆ ಬಂದು ನಿಂತ ಕೊನೇರಿ. ಅದರ ಬುಡಭಾಗದಲ್ಲಿ, ಸಲೀಸಾಗಿ ಮೂವರು ಕೂರುವಷ್ಟು ಜಾಗದ ಪೊಟರೆ. ತಡ ಮಾಡದೇ ಅದರೊಳಕ್ಕೆ ಮೊಲದಂತೆ ನುಸುಳಿ ಕುಳಿತ. ಅಲ್ಲಿ ತಲೆಹಿಡಿವಷ್ಟು ಕೊಳಕು ವಾಸನೆ, ಮುಖ ಕಿವುಚಿದ. ಬೆಳಗ್ಗೆವರೆಗೂ ತಾನಿಲ್ಲೇ, ಈ ಗೂಡಿನಲ್ಲೇ ಗಟ್ಟಯಾಗಿ ಜೀವ ಹಿಡಿಯಲೇಬೇಕಲ್ಲ, 'ಅಕಸ್ಮಾತ್ ಈ ಪೊಟರೆ ಯಾವುದಾದರೂ ಕರಡಿಯ ವಾಸಸ್ಥಳವಾಗಿದ್ದರೆ' ಆ ಯೋಚನೆ ಬಂದೊಡನೆ ಒಂದು ಕ್ಷಣ ಮೈ ಅದುರಿತು. ಹಾಗೇನೂ ಆಗಿರಲಿಕ್ಕಿಲ್ಲ ಎಂದು ತನ್ನ ತಾನೇ ಧೈರ್ಯ ತುಂಬಿಕೊಂಡ. ಸೊಳ್ಳೆಗಳೀಗ ಜೀಂಯ್‌ಗುಟ್ಟತೊಡಗಿದವು. ತಂದಿದ್ದ ಟವಲ್ ಬಿಚ್ಚಿ ಮುಖ ಮೈಗೆ ಹೊಚ್ಚಿಕೊಂಡ. ಸೊಳ್ಳೆಗಳ ಕಾಟ ಚೂರು ತಪ್ಪಿಸಿಕೊಂಡಂತೆನಿಸಿತು. ಮರುದಿನವಾದರೂ ತಾನು ಹುಡುಕುವ ಜಾಗ ಸಿಕ್ಕೇ ಸಿಗುತ್ತದೆ, ಆ ಮಹಾನುಭಾವ ಸಿಕ್ಕೇಸಿಗುತ್ತಾರೆ ಎಂಬ ನಂಬಿಕೆ ಅವನದು. ಬಲವಂತವಾಗಿ ರೆಪ್ಪೆ ಮುಚ್ಚಿದರೂ ನಿದ್ರೆ ಮಾತ್ರ ಹತ್ತಲಿಲ್ಲ. ಈಗ ನಿದ್ರೆಗಾಗಿ ಚಡಪಡಿಸತೊಡಗಿದ.